**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.490/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಹರ್ಷವರ್ದನ್ ಹೆಚ್.ಕೆ | ಪ್ರಾಸಾ-10 |
| ತಂದೆಯ ಹೆಸರು | : ಶೇಖರ್ ಪಾಲೇ ಗೌಡ | ಚಾಸಾ-15 |
| ವಯಸ್ಸು | : 33 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪಿ.ಎಸ್.ಐ | ದಿನಾಂಕಃ 12.09.2025. |
| ವಾಸಸ್ಥಳ | : ಗೋಣೀಬೀಡು ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ದಿ.18.07.2021 ರಿಂದ ದಿ.16.06.2023 ರವರೆಗೆ ಕಳಸ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.27.11.2022 ರಂದು ಪ್ರಕರಣದ ಕಡತವನ್ನು ಚಾಸಾ-14 ರವರಿಂದ ಪಡೆದುಕೊಂಡಿರುತ್ತೇನೆ. ನಂತರ ಪ್ರಕರಣದ ಆರೋಪಿಯನ್ನು ದಸ್ತಗಿರಿ ಮಾಡಲು ಘಟನೆ ನಡೆದ ಸ್ಥಳವಾದ ಮರಸಣಿಗೆ ಗ್ರಾಮದ ಚಾಸಾ-8 ರವರ ತೋಟಕ್ಕೆ ಹೋಗಿರುತ್ತೇವೆ. ನಂತರ ಆರೋಪಿಯು ಕಳಸದ ಕಡೆಗೆ ಹೋಗಿರುವ ಕುರಿತು ಮಾಹಿತಿಯು ಬಂದಿದ್ದು, ಆರೋಪಿಯನ್ನು ರಾ.8.45 ರ ಸಮಯಕ್ಕೆ ಬಾಳೆಕಾನ್ ಬಳಿಯಲ್ಲಿ ವಶಕ್ಕೆ ಪಡೆದು ಠಾಣೆಗೆ ಗಕರೆದುಕೊಂಡು ಹೋಗಲಾಗಿರುತ್ತದೆ. ನಂತರ ಆರೋಪಿಯನ್ನು ಪ್ರಾಥಮಿಕ ಪರೀಕ್ಷೆಗೆ ಒಳಪಡಿಸಲಾಗಿ ರಾ.9.00 ರ ಸಮಯಕ್ಕೆ ನ್ಯಾಯಾಲಯದ ಆದೇಶದಂತೆ ದಸ್ತಗಿರಿ ಕ್ರಮವನ್ನು ಜರುಗಿಸಿರುತ್ತೇನೆ. ನಂತರ ರಾ.10.00 ರ ಸಮಯಕ್ಕೆ ಆರೋಪಿಯು ಧರಿಸಿದ್ದ ಬಟ್ಟೆಯನ್ನು ತನಿಖೆಯ ಸಂಬಂಧ ವಶಪಡಿಸಿಕೊಳ್ಳಲಾಗಿರುತ್ತದೆ. ನಂತರ ಚಾಸಾ-5 ಮತ್ತು 6 ರವರನ್ನು ಠಾಣೆಗೆ ಬರಮಾಡಿಕೊಂಡು ರಾ.10.00 ರಿಂದ 10.30 ರ ಸಮಯದವರೆಗೂ ಮಹಜರ್ ಕ್ರಮವನ್ನು ಜರುಗಿಸ ಆರೋಪಿಯು ಧರಿಸಿದ್ದ ಬಟ್ಟೆಯನ್ನು ವಶಕ್ಕೆ ಪಡೆದುಕೊಳ್ಳಲಾಗಿರುತ್ತದೆ ಮತ್ತು ಸದರಿ ಸಮಯದಲ್ಲಿ ಫೋಟೋವನ್ನು ತೆಗೆಯಲಾಗಿರುತ್ತದೆ.

ನಂತರ ವಶಪಡಿಸಿಕೊಂಡ ಬಟ್ಟೆಯನ್ನು ಠಾಣಾ ಪಿ.ಎಫ್ ನಂ.90/2022 ರಡಿಯಲ್ಲಿ ನಮೂದಿಸಿ ಮುಂದಿನ ಕ್ರಮಕ್ಕಾಗಿ ನ್ಯಾಯಾಲಯದ ಮುಂದೆ ನಿವೇದನೆ ಮಾಡಿಕೊಳ್ಳಲಾಗಿರುತ್ತದೆ. ನಂತರ ಅದೇ ದಿನ ಅಮಾನತು ಮಹಜರ್ ಸಮಯದಲ್ಲಿ ತೆಗೆದ ಫೋಟೋದ ಬಾಬ್ತು ಚಾಸಾ-13 ರವರಿಂದ ಕಲಂ 65 ಬಿ ರಡಿಯಲ್ಲಿ ಪ್ರಮಾಣ ಪತ್ರವನ್ನು ಪಡೆದುಕೊಳ್ಳಲಾಗಿರುತ್ತದೆ. ನಂತರ ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಳ್ಳಲಾಗಿರುತದೆ. ದಿ.28.11.2022 ರಂದು ಆರೋಪಿಯು ಕೃತ್ಯ ನಡೆದ ಸ್ಥಳವಾದ ಮರಸಣಿಗೆ ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದು, ಸದರಿ ಸ್ಥಳದಲ್ಲಿ ತಾನು ಹಲ್ಲೆಗೆ ಬಳಸಿದ್ದ ಕತ್ತಿಯನ್ನು ತಂದು ಹಾಜರುಪಡಿಸಿದ್ದು, ಸದರಿ ಕತ್ತಿಯನ್ನು ಚಾಸಾ-3 ಮತ್ತು 4 ರವರ ಸಮಕ್ಷಮ ವಶಕ್ಕೆ ಪಡೆದುಕೊಂಡಿರುತ್ತೇವೆ. ಸದರಿ ಮಹಜರ್ ನ್ನು ಬೆ.10.00 ರಿಂದ 10.30 ರ ಸಮಯದಲ್ಲಿ ಜರುಗಿಸಲಾಗಿರುತ್ತದೆ. ಸದರಿ ಸಮಯದಲ್ಲಿ ಕೃತ್ಯ ನಡೆದ ಸ್ಥಳದ ನಕಾಶೆಯನ್ನು ಬರೆದು ಫೋಟೋವನ್ನು ತೆಗೆದುಕೊಳ್ಳಲಾಗಿರುತ್ತದೆ. ನಂತರ ಸದರಿ ಮುದ್ದೆಮಾಲುಗಳನ್ನು ಠಾಣಾ ಪಿ.ಎಫ್.ನಂ.99/2022 ರಡಿಯಲ್ಲಿ ನಮೂದಿಸಿ ಮುಂದಿನ

ಕ್ರಮಕ್ಕಾಗಿ ನ್ಯಾಯಾಯದ ಮುಂದೆ ನಿವೇದನೆ ಮಾಡಿಕೊಳ್ಳಲಾಗಿರುತ್ತದೆ.

ನಂತರ ಅದೇ ದಿನ ಚಾಸಾ-11 ರವರಿಗೆ ಕೃತ್ಯ ನಡೆದ ಸ್ಥಳದ ದಾಖಲಾತಿಗಳನ್ನು ಹಾಜರುಪಡಿಸುವಂತೆ ಸೂಚಿಸಲಾಗಿರುತ್ತದೆ. ನಂತರ ಚಾಸಾ-10 ರವರಿಗೆ ಗಾಯಾಳು ಧರಿಸಿದ್ದ ಬಟ್ಟೆಯನ್ನು ಸಂಗ್ರಹಣೆ ಮಾಡಿಕೊಡಲು ಮನವಿಯನ್ನು ನೀಡಲಾಗಿರುತ್ತದೆ. ನಂತರ ಚಾಸಾ-10 ರವರಿಗೆ ಗಾಯಾಳುವಿನ ರಕ್ತ ಮಾದರಿಯನ್ನು ಪರೀಕ್ಷಿಸಿ ವರದಿಯನ್ನು ನೀಡುವಂತೆ ಮನವಿ ಮಾಡಿಕೊಳ್ಳಲಾಗಿರುತದೆ. ಅದೇ ದಿನ ಚಾಸಾ-7 ಮತ್ತು 8 ರವರ ಹೇಳಿಕೆಯನ್ನು ಪಡೆದುಕೊಳ್ಳಲಾಗಿರುತ್ತದೆ. ಸದರಿ ಮುದ್ದೆಮಾಲುಗಳನ್ನು ಠಾಣಾ ಮೊ.ನಂ.95/2022 ರಡಿಯಲ್ಲಿ ನಮೂದು ಮಾಡಿಕೊಂಡು ಮುಂದಿನ ಕ್ರಮಕ್ಕೆ ನ್ಯಾಯಾಲಯದ ಮುಂದೆ ನಿವೇದನೆ ಮಾಡಿಕೊಳ್ಳಲಾಗಿರುತ್ತದೆ. ನಂತರ ದಿ.06.12.2022 ರಂದು ರಕ್ತದ ವರದಿಯನ್ನು ಚಾಸಾ-10 ರವರಿಂದ ಸ್ವೀಕರಿಸಿಕೊಂಡಿರುತ್ತೇನೆ. ನಂತರ ದಿ.08.12.2022 ರಂದು ವಶಪಡಿಸಿಕೊಂಡ ಎಲ್ಲಾ ಮುದ್ದೆಮಾಲುಗಳನ್ನು ಮಂಗಳೂರಿನ ಎಫ್.ಎಸ್.ಎಲ್. ರವರಿಗೆ ಸದರಿ ಮುದ್ದೆಮಾಲುಗಳ ಕುರಿತು ವರದಿಯನ್ನು ನೀಡುವಂತೆ ಮನವಿ ಮಾಡಿಕೊಂಡಿರುತ್ತೇನೆ. ನಂತರ ದಿ.08.12.2022 ರಂದು ಚಾಸಾ-1 ರವರು ಕೃತ್ಯ ನಡೆದ ಸ್ಥಳಕ್ಕೆ ಬಂದಿದ್ದು, ಚಾಸಾ-3 ಮತ್ತು 4 ರವರಿಗೆ ಪಂಚರಾಗಿ ಹಾಜಾರಾಗುವಂತೆ ನೋಟೀಸನ್ನು ಜಾರಿ ಮಾಡಿರುತ್ತೇವೆ. ನಂತರ ಚಾಸಾ-1 ಮತ್ತು 3, 4 ರವರ ಸಮಕ್ಷಮ ಬೆ.11.00 ರಿಂದ 11.30 ರ ಸಮಯದವರೆಗೆ ಕೃತ್ಯ ನಡೆದ ಸ್ಥಳದ ಮಹಜರ್ ನ್ನು ಜರುಗಿಸಿ ನಕಾಶೆಯನ್ನು ತಯಾರಿಸಿ ಮತ್ತು ಫೋಟೋವನ್ನು ತೆಗೆಯಲಾಗಿರುತ್ತದೆ.

ನಂತರ ಚಾಸಾ-2 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಚಾಸಾ-2 ರವರು ಡಿಸ್ಚಾರ್ಜ್ ಸಮ್ಮರಿ, ಸಿಟಿ ಸ್ಕ್ಯಾನ್ ಮತ್ತು ಇತರ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ. ದಿ.10.12.2022 ರಂದು ಚಾಸಾ-9 ರವರಿಗೆ ಗಾಯಾಳುಗಳ ಗಾಯದ ಪ್ರಮಾಣ ಪತ್ರವನ್ನು ನೀಡುವಂತೆ ಮನವಿ ಪತ್ರವನ್ನು ಸಲ್ಲಿಸಿರುತ್ತೇವೆ. ದಿ.28.12.2022 ರಂದು ಚಾಸಾ-11 ರವರಿಂದ ಬಂದ ಕೃತ್ಯ ನಡೆದ ಸ್ಥಳದ ದಾಖಲಾತಿಗಳನ್ನು ಸ್ವೀಕರಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-10 ರವರು ನೀಡಿದ ಗಾಯದ ದೃಢೀಕರಣ ಪತ್ರವನ್ನು ಸ್ವೀಕರಿಸಿಕೊಂಡಿರುತ್ತೇನೆ. ಅದೇ ದಿನ ಆರೋಪಿಯ ವಿರುದ್ಧ ಆರೋಪವು ಸಾಬೀತಾದ ಕಾರಣ ಮತ್ತು ಆರ್.ಎಫ್.ಎಸ್.ಎಲ್. ಮಂಗಳೂರು ರವರಿಂದ ವರದಿಯು ಬಂದಿರದ ಕಾರಣ ಹೆಚ್ಚುವರಿ ದೋ.ಪ.ಯನ್ನು ಸಲ್ಲಿಸಲು ಮನವಿಯನ್ನು ಕೋರಿ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇವೆ. ನಂತರ ದಿ.04.01.2023 ರಂದು ಆರ್.ಎಫ್.ಎಸ್.ಎಲ್. ಮಂಗಳೂರು ರವರಿಂದ ವರದಿಯು ಬಂದಿರುವ ವರದಿಯನ್ನು ಸ್ವೀಕರಿಸಿಕೊಂಡು, ನಂತರ ಅದೇ ದಿನ ಚಾಸಾ-9 ರವರಿಗೆ ಗಾಯಾಳುಗಳ ಗಾಯದ ಹೆಚ್ಚುವರಿ ವರದಿಯನ್ನು ನೀಡುವಂತೆ ಮನವಿ ಪತ್ರವನ್ನು ಸಲ್ಲಿಸಿರುತ್ತೇನೆ. ಅದೇ ದಿನ ಚಾಸಾ-9 ರವರಿಂದ ಬಂದ ವರದಿಯನ್ನು ಸ್ವೀಕರಿಸಿಕೊಂಡಿರುತ್ತೇನೆ. ದಿ.29.01.2023 ರಂದು ಹೆಚ್ಚುವರಿ ದೋ.ಪ.ಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿಪಿ-2, 4, 6, 7, 12, 15, 16 ಮತ್ತು 17 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ 17(ಬಿ), 16(ಬಿ), 15(ಬಿ), 12(ಸಿ), 7(ಸಿ), 4(ಎ) ಮತ್ತು 2(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3, 8 ರಿಂದ 11, 13 ಮತ್ತು 14 ರಲ್ಲಿ ತಮ್ಮ

ಇರುವಿಕೆಯ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯು ದಿ.28.11.2022 ರಂದು ತಾವು ಚಾಸಾ-11 ರವರಿಗೆ ನೀಡಿದ ಮನವಿ ಪ್ರತಿಯನ್ನು ನೋಡಿ ಗುರುತಿಸಿದ್ದು, ಸದರಿ ಮನವಿ ಪ್ರತಿಯನ್ನು ನಿಪಿ-18, ಸಾಕ್ಷಿಯು ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ದಿ.09.12.2022 ರಂದು ಚಾಸಾ-11 ರವರಿಂದ ಸ್ವೀಕರಿಸಿದ ವರದಿಯ ಪ್ರತಿಯನ್ನು ನೋಡಿ ಗುರುತಿಸಿದ್ದು ನಿಪಿ-19 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ಚಾಸಾ-2 ರವರಿಂದ ಸ್ವೀಕರಿಸಿದ ಡಿಸ್ಚಾರ್ಜ್ ಸಮ್ಮರಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-20 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು. ದಿ.29.11.2022 ರಂದು ಆರ್.ಎಫ್.ಎಸ್.ಎಲ್. ರವರಿಂದ ಸ್ವೀಕರಿಸಿದ ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ವರದಿಯನ್ನು ನಿಪಿ-21, ಸಾಕ್ಷಿಯು ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಚಾಸಾ-10 ರವರಿಂದ ಪಡೆದ ರಕ್ತದ ಮಾದರಿಯನ್ನು ನೋಡಿ ಗುರುತಿಸಿದ್ದು, ಸದರಿ ವರದಿಯನ್ನು ನಿಪಿ-22 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-22(ಎ) ಎಂದು ಗುರುತಿಸಲಾಯಿತು. ದಿ.28.11.2022 ರಂದು ಚಾಸಾ-13 ರವರಿಂದ ಪಡೆದ ಕಲಂ 65 ಬಿ ರಡಿಯ ಪ್ರಮಾಣ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಸದರಿ ಪ್ರತಿಯನ್ನು ನಿಪಿ-23 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-23(ಎ) ಎಂದು ಗುರುತಿಸಲಾಯಿತು. ದಿ.27.11.2022 ರ ಆರೋಪಿಯ ಸ್ವ ಇಚ್ಛಾ ಹೇಳಿಕೆಯ ಪ್ರತಿಯನ್ನು ನಿಪಿ-24 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-24(ಎ) ಎಂದು ಗುರುತಿಸಲಾಯಿತು. ದಿ.27.11.2022 ರಂದು ಚಾಸಾ-9 ರವರಿಂದ ಪಡೆದ ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ವರದಿಯನ್ನು ನಿಪಿ-25, ಸಾಕ್ಷಿಯು ಸಹಿಯನ್ನು ನಿಪಿ-25(ಎ) ಎಂದು ಗುರುತಿಸಲಾಯಿತು. ದಿ.04.01.2023 ರಂದು ಚಾಸಾ-9 ರವರಿಂದ ಗಾಯಾಳುವಿನ ಹೆಚ್ಚಿನ ಗಾಯದ ಬಗ್ಗೆ ಪಡೆದ ವರದಿಯನ್ನು ನೋಡಿ ಗುರುಸಿದ್ದು, ಸದರಿ ವರದಿಯನ್ನು ನಿಪಿ-26, ಸಾಕ್ಷಿಯು ಸಹಿಯನ್ನು ನಿಪಿ-26(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಎಂ.ಒ.1 ರಿಂದ 5 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ.ಬಿ.ವಿ. ವಕೀಲರಿಂದಃ</u>**

ಚಾಸಾ-14 ರವರಿಂದ ಯಾವುದೇ ಕಡತವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ದಿನ ಆರೋಪಿಯನ್ನು ದಸ್ತಗಿರಿ ಮಾಡಲು ಕೃತ್ಯ ನಡೆದ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಯಾವುದೇ ಬಟ್ಟೆಗಳನ್ನು ವಶಪಡಿಸಿಕೊಂಡಿರುವುದಿಲ್ಲ ಮತ್ತು ಯಾವುದೇ ಫೋಟೋಗಳನ್ನು ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿಯಾಗಿ ಚಾಸಾ-13 ರವರಿಂದ ಕಲಂ 65 ಬಿರಡಿಯಲ್ಲಿ ಪ್ರಮಾಣ ಪ್ರತಿಯನ್ನು ಪಡೆದುಕೊಂಡಿರುವುದಿಲ್ಲ ಮತ್ತು ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ದಿನ ದಿ.28.11.2022 ರಂದು ಕೃತ್ಯ ನಡೆದ ಸ್ಥಳದಿಂದ ಕತ್ತಿಯನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-11 ರವರಿಂದ ಯಾವುದೇ ವರದಿಯನ್ನು ಕೋರಿ ಮನವಿ ಪತ್ರವನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರ ಬಟ್ಟೆಯನ್ನು

ಕೋರಿ ಮಾತ್ರ ಮನವಿ ಪತ್ರವನ್ನು ಸಲ್ಲಿಸಲಾಗಿರುತ್ತದೆ. ನಿಪಿ-15 ರಲ್ಲಿ ಬಟ್ಟೆಯನ್ನು ಕೋರಿ ಸಲ್ಲಿಸಿದ ಅರ್ಜಿಯು ವಸಂತರವರಿಗೆ ಸಂಬಂಧಿಸಿದ್ದಾಗಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಗಾಯಾಳುವಿನ ರಕ್ತದ ಮಾದರಿಯನ್ನು ಕೋರಿ ಮನವಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಚಾಸಾ-7 ಮತ್ತು 8 ರವರ ಹೇಳಿಕೆಯನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-3 ಮತ್ತು 4 ರವರಿಗೆ ಘಟನಾ ಸ್ಥಳಕ್ಕೆ ಹಾಜರಾಗುವಂತೆ ಯಾವುದೇ ನೋಟೀಸ್ ಜಾರಿ ಮಾಡಿರುವುದಿಲ್ಲ ಮತ್ತು ರಕ್ತದ ಮಾದರಿಯ ವರದಿಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದ ನಕಾಶೆ ಮತ್ತು ಫೋಟೋಗಳು ಸೃಷ್ಟಿಸಿದ್ದಾಗಿರುತ್ತದೆ ಮತ್ತು ಈ ಪ್ರಕರಣದಕ್ಕೆ ಸಂಬಂಧಿಸಿದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರ ಹೇಳಿಕೆಯನ್ನು ಪಡೆದು ಡಿಸ್ಚಾರ್ಜ್ ಸಮ್ಮರಿಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಿ.28.12.2022 ರಂದು ಚಾಸಾ-11 ರವರಿಂದ ಘಟನಾ ಸ್ಥಳದ ವರದಿಯನ್ನು ಪಡೆದುಕೊಂಡಿರುವುದಿಲ್ಲ ಮತ್ತು ಗಾಯಾಳುವಿನ ಪ್ರಮಾಣ ಪತ್ರವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮಂಗಳೂರಿನ ಆರ್.ಎಫ್.ಎಸ್.ಎಲ್. ರವರಿಗೆ ಹೆಚ್ಚಿನ ಮಾಹಿತಿಯನ್ನು ಕೋರಿ ಮನವಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಮಾನತುಪಡಿಸಿಕೊಂಡಿರುವ ಶರ್ಟ್ ಕೇಸರಿ ಬಣ್ಣದ್ದು ಎಂದರೆ ಸರಿಯಲ್ಲ. ಎಂ.ಒ.3 ನ್ನು ಘಟನಾ ಸ್ಥಳದಿಂದ ಅಮಾನತುಪಡಿಸಿಕೊಳ್ಳಲಾಗಿರುತ್ತದೆ ಎಂದು ಹೇಳಲು ಯಾವುದೇ ವಿಷೇಶ ಗುರುತು ಇಲ್ಲ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಸದರಿ ಕತ್ತಿಯು ಮಲೆನಾಡಿನ ಮನೆಗಳಲ್ಲಿ ಉಪಯೋಗಿಸುತ್ತಾರೆ ಎಂದರೆ ಸರಿ. ಸದರಿ ಮಾದರಿಯ ಕತ್ತಿಯನ್ನು ಪ್ರಸ್ತುತ ಪ್ರಕರಣಕ್ಕೆ ಸಹಾಯವಾಗಲೆಂದು ಹಾಜರುಪಡಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಯಾವುದೇ ಆರೋಪ ಸಾಬೀತಾಗದಿದ್ದರೂ ಇಲಾಖಾ ಅಂಕಿ ಅಂಶಕ್ಕೋಸ್ಕರ ಸುಳ್ಳು ದೋ.ಪ.ಯನ್ನು ಸಲ್ಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.490/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಮೋಹನ್ ಕುಮಾರ್ ಸಿ.ಆರ್ | ಪ್ರಾಸಾ-11 |
| ತಂದೆಯ ಹೆಸರು | : ಸಿ.ಸಿ. ರಾಜಣ್ಣ | ಚಾಸಾ-14 |
| ವಯಸ್ಸು | : 52 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಎ.ಎಸ್.ಐ | ದಿನಾಂಕಃ 12.09.2025. |
| ವಾಸಸ್ಥಳ | : ಶೃಂಗೇರಿ ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು 2019 ರಿಂದ 2024 ರವರೆಗೆ ಬಣಕಲ್ ಪೋಲಿಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.27.11.2022 ರಂದು ಹಗಲು SHO ಆಗಿ ಕರ್ತವ್ಯದಲ್ಲಿ ನಿರತನಾಗಿದ್ದಾಗ, ಕಳಸ ಸಮುದಾಯ ಆರೋಗ್ಯ ಕೇಂದ್ರದಿಂದ ಮಾಹಿತಿ ಬಂದಿರುತ್ತದೆ. ತದ ನಂತರ ಚಾಸಾ-1 ಅಂದರೆ ಗಾಯಾಳುವಿನ ಪತ್ನಿ ರವರು ನಮ್ಮ ಠಾಣೆಗೆ ಬಂದು ದೂರನ್ನು ದಾಖಲಿಸಿರುತ್ತಾರೆ. ಅದೇ ದಿನ ಸ.7.00 ರ ಸಮಯಕ್ಕೆ ಅವರು ನೀಡಿದ ಮಾಹಿತಿಯನ್ನು ನಾನು ಬರವಣಿಗೆ ಮಾಡಿಕೊಂಡು, ಭಾರತ ದಂಡ ಸಂಹಿತೆಯ ಕಲಂ 326 ರಡಿಯಲ್ಲಿ ಪ್ರ.ವ.ವ.ಯನ್ನು ತಯಾರಿಸಿರುತ್ತೇನೆ. ನಂತರ ರೇವುಗೊಂಡ ಬಿರಾದರ ಎಂಬ ಸಿಬ್ಬಂದಿಯ ಮುಖಾಂತರ ನ್ಯಾಯಾಲಯಕ್ಕೆ ಪ್ರ.ವ.ವ.ಯನ್ನು ಕಳುಹಿಸಿಕೊಟ್ಟಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-15 ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ನಿಪಿ-1 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.27.11.2022 ರಂದು ತಯಾರಿಸಿದ ಪ್ರ.ವ.ವ.ಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-27 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-27(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್.ಡಿ. ವಕೀಲರಿಂದ ಆರೋಪಿಪರ ವಕೀಲರಾದ ಶ್ರೀ ಜಿ.ಬಿ.ವಿ.**

**ವಕೀಲರ ಪರವಾಗಿಃ**

ಸ.6.30 ರ ಸಮಯಕ್ಕೆ ನನಗೆ ಕಳಸದ ಆರೋಗ್ಯ ಕೇಂದ್ರದಿಂದ ಪ್ರಕರಣದ ಕುರಿತು ಮಾಹಿತಿ ಬಂದಿರುತ್ತದೆ. ಸದರಿ ಆರೋಗ್ಯ ಕೇಂದ್ರದಿಂದ ನಮ್ಮ ಠಾಣೆಗೆ ಹೆಚ್ಚಿನ ಅಂತರವಿರುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಯಾವುದಾದರೂ ವ್ಯಕ್ತಿ ಅಪಘಾತಕ್ಕೊಳಗಾಗಿರುತ್ತಾರೆ ಎಂದು ತಿಳಿದು ಬಂದಲ್ಲಿ ನಾವೇ ಸ್ವತಃ ಹೋಗಿ ಹೇಳಿಕೆಯನ್ನು ಪಡೆಯುತ್ತೇವೆ ಎಂದರೆ ಸರಿ. ಪ್ರಸ್ತುತ ಪ್ರಕರಣದಲ್ಲಿಯೂ ನನಗೆ ಆ ರೀತಿಯಾಗಿ ಹೇಳಿಕೆ ಪಡೆಯಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಚಾಸಾ-1 ರವರು ಚಾಸಾ-2 ರವರನ್ನು ಯಾರು ಆಸ್ಪತ್ರೆಗೆ ಸೇರಿಸಿರುತ್ತಾರೆ ಎಂಬ ವಿಷಯವನ್ನು ನಮಗೆ ತಿಳಿಸಿರುವುದಿಲ್ಲ. ಚಾಸಾ-1 ರವರು ತಾನೇ ಸ್ವತಃ ಚಾಸಾ-2 ರವರನ್ನು

ಆಸ್ಪತ್ರೆಗೆ ಸೇರಿಸಿರುತ್ತೇನೆ ಎಂದು ಹೇಳಿರುವುದಿಲ್ಲ. ಚಾಸಾ-1 ರವರೊಟ್ಟಿಗೆ ಚಾಸಾ-2 ರವರು ದೂರು ನೀಡಲು ಠಾಣೆಗೆ ಬಂದಿರುತ್ತಾರೋ ಇಲ್ಲವೋ ಎಂದು ನೆನಪಾಗುತ್ತಿಲ್ಲ. ಮಾಹಿತಿ ಬಂದ ಸಮಯದಲ್ಲಿ ಚಾಸಾ-2 ರವರಿಗೆ ಯಾರು ಹಲ್ಲೆ ಮಾಡಿರುತ್ತಾರೆ ಎಂದು ಹೇಳಿರುವುದು ನೆನಪಾಗುತ್ತಿಲ್ಲ. ಒಂದು ವೇಳೆ ಚಾಸಾ-2 ರವರಿಗೆ ಹಲ್ಲೆಯಾಗಿದ್ದರೆ ನಾನು ಸ್ವತಃ ಅವರ ಹೇಳಿಕೆಯನ್ನು ಪಡೆಯುತ್ತಿದ್ದೆ ಎಂದರೆ ಸಾಕ್ಷಿಯು ಚಾಸಾ-2 ರವರ ಪತ್ನಿಯಾದ ಚಾಸಾ-1 ರವರೇ ದೂರನ್ನು ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ.

ಚಾಸಾ-2 ರವರು ಯಾವುದೇ ಹಲ್ಲೆಗೆ ಒಳಗಾಗದಿದ್ದರೂ ಚಾಸಾ-1 ರವರ ದೂರಿನ ಆಧಾರದ ಮೇರೆಗೆ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.